**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-167/2015 **PW**-1

**ದಿಃ 27.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**8.** ತಮ್ಮ ಮಾವನಿಗೆ ನಾಲ್ಕು ಜನ ಮಕ್ಕಳೆಂದು ತಿಳಿಸಿದ್ದು ಅವರು ಯಾರು ಎಂದರೆ ಬಸವ್ವ, ದ್ಯಾಮವ್ವ ಗಂಗವ್ವ , ನೀಲವ್ವ ಆಗಿರುತ್ತಾರೆ. ಇವರಲ್ಲಿ ಬಸವ್ವ ಮರಣ ಹೊಂದಿರುತ್ತಾರೆ. ಇವರಿಗೆ ಮೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳಿದ್ದು ಅವರು ಯಾರು ಎಂದರೆ ಕರಿಯಪ್ಪ , ಶೇಖಪ್ಪ , ಮುದಕಪ್ಪ , ಮುದಕವ್ವ , ನೀಲವ್ವ ಆಗಿರುತ್ತಾರೆ. ಅವರೆಲ್ಲರೂ ಈ ಪ್ರಕರಣದಲ್ಲಿ ಪಕ್ಷಗಾರರು ಆಗಿರುತ್ತಾರೆಂದರೆ ಸರಿ. ಚನ್ನಪ್ಪನ ಅಂದರೆ ನನ್ನ ಮಾವನ ಮೂರು ಜನ ಮಕ್ಕಳು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆದರೆ ವಂಶಾವಳಿಯಲ್ಲಿ ತೋರಿಸಿರುತ್ತೇನೆ. ತಮ್ಮ ಪ್ರಕಾರ ಚನ್ನಪ್ಪ ಕಟ್ಟಿ ರವರು ಯಾವದೇ ಮೃತ್ಯು ಪತ್ರ ಮಾಡದೇ ಹಾಗೂ ವಾಟ್ನೀ ಮಾಡದೇ ಮರಣ ಹೊಂದಿರುತ್ತಾರೆಂದರೆ ಸರಿ. ನಾಲ್ಕು ಜನ ಹೆಣ್ಣು ಮಕ್ಕಳು ಚನ್ನಪ್ಪ ಕಟ್ಟಿ ರವರ ವಾರಸಾದಾರರು ಎಂದರೆ ಸರಿ. ಚನ್ನಪ್ಪ ಕಟ್ಟಿ ರವರ ಹೆಣ್ಣು ಮಕ್ಕಳು ಸಹ ಚನ್ನಪ್ಪ ಕಟ್ಟಿ ರವರ ಆಸ್ತಿಯಲ್ಲಿ ಪಾಲುದಾರರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಮದುವೆ ಮಾಡಿಕೊಟ್ಟಿರುತ್ತಾರೇ ಎನ್ನುತ್ತಾರೆ. ಚನ್ನಪ್ಪ ಕಟ್ಟಿ ರವರ ಹೆಣ್ಣು ಮಕ್ಕಳು ಚನ್ನಪ್ಪ ಕಟ್ಟಿ ರವರು ಬದುಕಿದ್ದಾಗ ಹಕ್ಕು ಬೇಡ ಎಂದು ಯಾವದಾದರೂ ನೋಂದಾಯಿತ ಕಾಗದ ಪತ್ರವನ್ನು ಬರೆದುಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಈ ಕೇಸು ಚಾಲ್ತಿಯಲ್ಲಿದ್ದಾಗ ಚನ್ನಪ್ಪ ಕಟ್ಟಿ ರವರ ನಾಲ್ಕು ಜನ ಹೆಣ್ಣು ಮಕ್ಕಳು 2 ಮತ್ತು 3 ನೇ ಪ್ರತಿವಾದಿಯರ ಪರವಾಗಿ ಹಕ್ಕು ಬಿಟ್ಟುಕೊಟ್ಟ ಬಗ್ಗೆ ರಾಜೀ ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಹೆಣ್ಣು ಮಕ್ಕಳು ನಿಮ್ಮ ಪರವಾಗಿ ಯಾವದೇ ಹಕ್ಕು ಬಿಟ್ಟ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾವು ಕೇಳಿಲ್ಲ ಮತ್ತು ಅವರು ಬರೆದುಕೊಟ್ಟಿಲ್ಲ ಎಂದು ಹಾಗೂ ವಾಟ್ನೀ ದಾವಾ ಮಾಡಿಲ್ಲ ಎಂದು ನುಡಿಯುತ್ತಾರೆ.

9. ಸಾಕ್ಷಿಗೆ ರಾಜೀ ಪತ್ರವನ್ನು ತೋರಿಸಿ ಅದರಲ್ಲಿರುವ ಫೋಟೋಗಳಲ್ಲಿ ಇರುವ ವ್ಯಕ್ತಿಗಳು ಯಾರು ಎಂದು ಕೇಳಲಾಗಿ ಸಾಕ್ಷಿಯು ಫೋಟೋಗಳನ್ನು ನೋಡಿ ಅವರು 1 ನೇ ಪ್ರತಿವಾದಿಯ ವಾರಸಾದಾರರು, 4 ರಿಂದ 6 ನೇ ಪ್ರತಿವಾದಿಯರು ಎಂದು ನುಡಿಯುತ್ತಾರೆ. ಈ ಸಂದರ್ಬದಲ್ಲಿ ವಾದಿ ಪರ ವಕೀಲರು ಸದರಿ ರಾಜೀ ಅರ್ಜಿಯ ಮೇಲೆ ಸಲ್ಲಿಸಿದ ಅರ್ಜಿಯನ್ನು ಈ ನ್ಯಾಯಾಲಯವು ವಜಾ ಮಾಡಿರುತ್ತದೆಂದು ತಿಳಿಸಿರುತ್ತಾರೆ. ಪ್ರತಿವಾದಿ ಪರ ವಕೀಲರು ಆ ಆದೇಶದ ರಿಟ್ ಅರ್ಜಿಯು ಬಾಕೀ ಇರುತ್ತದೆಂದು ತಿಳಿಸಿರುತ್ತಾರೆ. ರಾಜೀ ಅರ್ಜಿಯು ಈ ಕಡತದ ಭಾಗವಾಗಿರುವ ಕಾರಣ ಅದನ್ನು ಯಾವದೇ ರೀತಿಯ ನಿಶಾನೆಗೆ ಒಳಪಡಿಸಿರುವದಿಲ್ಲ.

10. ಚನ್ನಪ್ಪನ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು 75, 77, 37, 52, 55, 68, 49, 144 ಆಸ್ತಿಗಳು ಇದ್ದವು. ಆತನ ಮರಣದ ನಂತರ ಕೆಲವೊಂದು ಆಸ್ತಿಗಳನ್ನು ಖರೀದಿ ಮಾಡಲಾಗಿರುತ್ತದೆ. ಈ ಎಲ್ಲಾ ಆಸ್ತಿಗಳನ್ನು ಈ ಪ್ರಕರಣದಲ್ಲಿ ದಾವಾ ಆಸ್ತಿಗಳಾಗಿ ಸೇರಿಸಿರುತ್ತೇನೆ. ತಾವು ದಾವಾ ಆಸ್ತಿಗಳಾಗಿ ಬ್ಲಾಕ ನಂಬರಃ 52/1, 75, 77 ಮತ್ತು 37 ಮಾತ್ರ ಸೇರಿಸಿರುತ್ತೀರಿ ಎಂದರೆ ಸರಿ. ನಾನು ಎಲ್ಲಾ ಆಸ್ತಿಗಳನ್ನು ಅಂದರೆ ಮೇಲೆ ಹೇಳಿದ 8 ಬ್ಲಾಕ ನಂಬರಗಳನ್ನು ಈ ಪ್ರಕರಣದಲ್ಲಿ ದಾವಾ ಆಸ್ತಿಯಾಗಿ ಸೇರಿಸಿರುತ್ತೇನೆ. ಚನ್ನಪ್ಪನ ಹೆಸರಿನಲ್ಲಿ ಆ ಮೂರು ಆಸ್ತಿಗಳು ಇವೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆ ಮೂರು ಆಸ್ತಿಗಳು ಯಾರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ಮಲ್ಲಪ್ಪ ಕಟ್ಟಿ , ಕಲಾವತಿ ಕಟ್ಟಿ ಇವರಿಬ್ಬರ ಹೆಸರಿನಲ್ಲಿರುತ್ತವೆ. ಮಲ್ಲಪ್ಪ ಹೆಸರಿನಲ್ಲಿ ಬ್ಲಾಕ ನಂಃ85 ಪ್ಲಾಟ ನಂಃ 21, ಬ್ಲಾಕ ನಂಃ 90, ಪ್ಲಾಟ ನಂಃ 128 ಇರುತ್ತವೆ. ಕಲಾವತಿ ಹೆಸರಿನಲ್ಲಿ ಬ್ಲಾಕ ನಂಃ 95, ಪ್ಲಾಟ ನಂಃ110 ಇರುತ್ತದೆ.

11. ಚನ್ನಪ್ಪನ ಹೆಸರಿನಲ್ಲಿದ್ದ ಆಸ್ತಿಗಳ ವಿಸ್ತೀರ್ಣ ಹೇಳಬಹುದಾ ಎಂದರೆ ಸಾಕ್ಷಿಯು ಸರ್ವೆ ನಂಃ75 , 16 ಎಕರೆ 21 ಗುಂಟೆ , 77 - 9 ಎಕರೇ 26 ಗುಂಟೆ , 37 - 7 ಎಕರೆ, 52- 3 ಎಕರೆ 33 ಗುಂಟೆ , 55-6 ಎಕರೆ , 68-58 ಎಕರೆ. 49- ಒಂದುವರೆ ಗುಂಟೆ ಹಾಗೂ 144 - 4 ಗುಂಟೆ 35 ಆಣೆ ಇರುತ್ತದೆ ಎನ್ನುತ್ತಾರೆ. 16 ಆಣೆಗೆ ಒಂದು ಗುಂಟೆ ಎಂದರೆ ಸರಿ. 4 ಗುಂಟೆ 35 ಆಣೆ ಎಂದು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸೇರಿಸದ ಎರಡು ನಂಬರುಗಳು ಯಾರ ಹೆಸರಿನಲ್ಲಿವೆ ಎಂದು ತೋರಿಸಲು ದಾಖಲೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎನ್ನುತ್ತಾರೆ. ಚನ್ನಪ್ಪನ ಎಲ್ಲಾ ಆಸ್ತಿಗಳಲ್ಲಿ ಪಾಲು ಬೇಕೆಂದು ದಾವೆ ಮಾಡಿರುತ್ತೀರಿ ಎಂದರೆ ಸರಿ. ಯಾವ ಕಾರಣಕ್ಕಾಗಿ ಆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಹಿರಿತನ ಮಾಡುವ ಬಸಪ್ಪ ಕಟ್ಟಿ ರವರ ಬಳಿ ಇರುವ ಕಾರಣ ಕೊಟ್ಟಿಲ್ಲ ಎನ್ನುತ್ತಾರೆ. ನಮ್ಮ ಹುಡುಗರಿಗೆ ತಿಳಿಸಿದ ಕಾರಣ ಅವರು ಮಲ್ಲಪ್ಪ ಮತ್ತು ಅವರ ಹೆಂಡತಿ ಹೆಸರಿನಲ್ಲಿರುವ

ದಾಖಲೆಗಳನ್ನು ಸಂಗ್ರಹಿಸಿ ಕೊಟ್ಟಿರುತ್ತಾರೆ. ತಾವು ಉದ್ದೇಶಪೂರ್ವಕವಾಗಿ ಚನ್ನಪ್ಪನ ಮೂರು ಆಸ್ತಿಗಳನ್ನು ಸೇರಿಸಿಲ್ಲ ಮತ್ತು ಅದರ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಸೇರಿಸಿರುತ್ತೇನೆ ಎನ್ನುತ್ತಾರೆ. ತಾವು ಅವುಗಳನ್ನು ಸೇರಿಸದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

12. ಬಸಪ್ಪನ ಮನೆ ಮುಂದೆ ಇರುವ ಮನೆಯ ಹೆಚ ಡಿ ಎಂ ಸಿ ಮನೆ ನಂಬರ ಎಷ್ಟು ಎಂದರೆ ಸಾಕ್ಷಿಯು ನನಗೇ ಗೊತ್ತಿಲ್ಲ ಆದರೆ ಪ್ಲಾಟ ನಂಬರ ಗೊತ್ತಿರುತ್ತದೆ ಎನ್ನುತ್ತಾರೆ. ಸದರಿ ಪ್ಲಾಟ ನಂಬರಃ49 ಆಗಿರುತ್ತದೆ. ಹೊಸ ಮನೆಯು ಸಹ ದಾವಾ ಆಸ್ತಿಯಾಗಿರುತ್ತದೆಂದರೆ ಸರಿ. ಹೊಸದಾಗಿ ಕಟ್ಟಿರುವ ಮನೆಯಲ್ಲಿಯೂ ಸಹ ಭಾಗ ಬೇಕೆಂದು ಕೇಳಿರುತ್ತೀರಾ ಎಂದರೆ ಸಾಕ್ಷಿಯು ಕೇಳಿರುತ್ತೇನೆ ಎನ್ನುತ್ತಾರೆ.

ಈ ಸಂದರ್ಬದಲ್ಲಿ ಬೆಳಗಿನ ಕಾಲಾವದಿ ಮುಗಿದ ಕಾರಣ ಮದ್ಯಾಹ್ನದ ಕಾಲಾವದಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.